ನೇಮಕಾತಿ ಪ್ರಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ನಂ.8, ಎಂ.ಎಸ್.ಬಿ-1, 6 ಮತ್ತು 7ನೇ ಮಹಡಿ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560052,
ದೂರವಾಣಿ ಸಂಖ್ಯೆ: 080-22283366, 22204466, 22265755,
ಇ-ಮೇಲ್: edkreis@rediff.com

---

# ಪ್ರಕಟಣೆ

ದಿ:02.08.2016

ವಿಷಯ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್/ರಿಟ್ ಅಪೀಲುಗಳ ತೀರ್ಪುಗಳಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ, ಅಧೀನದ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲದಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ಪರಿಗಣಿಸಿ, ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯ ಪ್ರಕಟಣೆ ಕುರಿತು.

ಉಲ್ಲೇಖ:
1. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 20204-20364/2011 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:13.07.2012.
2. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 5127/2012 ಮತ್ತು ಇತರೆ ಸಂಯೋಜಿತ ಪ್ರಕರಣಗಳ ತೀರ್ಮಾನ ದಿ:28.02.2013 ಮತ್ತು ರಿಟ್ ಅರ್ಜಿ ಸಂಖ್ಯೆ: 958-988/2015, ದಿ: 12/02/2015
3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ, ಧಾರವಾಡ ಪೀಠದ ಮೇಲ್ಮನವಿ ಅರ್ಜಿ ಸಂಖ್ಯೆ: 31346/2012 ಮತ್ತು ಇತರ ಸಂಯೋಜಿತ ಪ್ರಕರಣಗಳ ತೀರ್ಮಾನ ದಿನಾಂಕ: 21.03.2013.
4. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 113076/2014 ಮತ್ತು ಸಂಯೋಜಿತ ರಿಟ್ ಅರ್ಜಿಗಳಾದ 100572/2015 ಮತ್ತು 100573-582/2015, ದಿನಾಂಕ: 21.01.2015.
5. ಈ ಕಛೇರಿಯ ಆಯ್ಕೆಪಟ್ಟಿ ಪ್ರಕಟಣೆ ಸಂಖ್ಯೆ: ಕವಶಿಸಸ/ಆಡಳಿತ/ಹೊನೇ/ಸಿ.ಆರ್-01/2013-14, ದಿನಾಂಕ: 19.10.2015 ಮತ್ತು 08.02.2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮತ್ತು ಉಲ್ಲೇಖ (1) ರಿಂದ (4)ರ ವರೆಗಿನ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಗಳ ತೀರ್ಪುಗಳನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇದರ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿವತಿಯಿಂದ/ಜಿಲ್ಲಾ ಪಂಚಾಯಿತಿಯಿಂದ ತಾತ್ಕಾಲಿಕವಾಗಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರು ಮತ್ತು ಸಹ ಶಿಕ್ಷಕರುಗಳಿಗೆ ಸೇವಾ ಕೃಪಾಂಕ ನೀಡಿ, ನಿಬಂಧನೆಗಳಾನುಸಾರ ಮೂಲ ದಾಖಲೆಗಳ ಪರಿಶೀಲನೆ ನಡೆಸಿ, ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಉಲ್ಲೇಖ(5)ರ ಆದೇಶದಲ್ಲಿ ಕ್ರಮವಾಗಿ ದಿ:19.10.2015ರಲ್ಲಿ 409 ಅಭ್ಯರ್ಥಿಗಳ ಮತ್ತು ದಿ:08.02.2016ರಲ್ಲಿ 102 ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಮಾಡಿ ಪ್ರಕಟಿಸಲಾಗಿತ್ತು. ಆ ತರುವಾಯ ಕೆಲವು ಅಭ್ಯರ್ಥಿಗಳಿಂದ ಆಯ್ಕೆಗೆ ಪರಿಗಣಿಸುವಂತೆ ಬಂದ ಮನವಿಗಳನ್ನು ಪುನರ್ ಪರಿಶೀಲನೆ ನಡೆಸಿ ಕೆಲವು ಜಟಿಲವಾದ ಪ್ರಕರಣಗಳಲ್ಲಿ ಕಡತಗಳನ್ನು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ಏಕ ಕಡತದಲ್ಲಿ ಅನುಮೋದನೆ ಪಡೆಯಲಾಗಿದೆ. ಅಂತಹ ಈ ಕೆಳಕಂಡ 07(ಏಳು) ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಈ ಮುಂದೆ ತಿಳಿಸಿದ ನಿಬಂಧನೆಗಳಿಗೆ ಒಳಪಟ್ಟು ಪ್ರಕಟಿಸಲಾಗಿದೆ.

## ಹುದ್ದೆ: ಗಣಿತ ಸಹ ಶಿಕ್ಷಕರು

| ಕ್ರ.ಸ | ನೋ.ಸಂ | ಅಭ್ಯರ್ಥಿಯ ಹೆಸರು | ಲಿಂಗ | ಪ್ರವರ್ಗ | ಕ.ಮಾ | ಜನ್ಮ ದಿನಾಂಕ | ಸಿ.ಸಿ.ಇ. ಅಂಕಗಳು | ಪರಿಗಣಿಸಿದ ಸೇವಾ ವರ್ಷಗಳು | ಸೇವಾ ಕೃಪಾಂಕ ಶೇ. | ಶೇ. ಒಟ್ಟು ಅಂಕಗಳು | ಪ್ರವರ್ಗಕ್ಕೆ ಮೀಸಲಿರಿಸಿ ಕಟ್–ಆಫ್ ಅಂಕಗಳು |
|---|---|---|---|---|---|---|---|---|---|---|---|
| 01 | 261716 | ಸುನಿತಾ ಜಿ. ರಾವ್ | ಮಹಿಳೆ | 2ಎ | ಹೌದು | 14.11.1970 | 50.8584 | 3 | 15 | 65.8584 | 60.8901 |
| 02 | 113060 | ಹೇಮಾವತಿ ಹೆಚ್. | ಮಹಿಳೆ | 3ಎ | ಹೌದು | 04.11.1985 | 54.3414 | 2 | 10 | 64.3414 | 62.9489 |
| 03 | 148263 | ಪುಷ್ಪಾ ಕೆ.ಪಿ. | ಮಹಿಳೆ | ಪ.ವರ್ಗ | ಹೌದು | 18.01.1985 | 57.2681 | 1 | 5 | 62.2681 | 58.8063 |

## ಹುದ್ದೆ: ಆಂಗ್ಲ ಭಾಷಾ ಶಿಕ್ಷಕರು

| ಕ್ರ.ಸ | ನೋ.ಸಂ | ಅಭ್ಯರ್ಥಿಯ ಹೆಸರು | ಲಿಂಗ | ಪ್ರವರ್ಗ | ಕ.ಮಾ | ಜನ್ಮ ದಿನಾಂಕ | ಸಿ.ಸಿ.ಇ. ಅಂಕಗಳು | ಪರಿಗಣಿಸಿದ ಸೇವಾ ವರ್ಷಗಳು | ಸೇವಾ ಕೃಪಾಂಕ ಶೇ. | ಶೇ. ಒಟ್ಟು ಅಂಕಗಳು | ಪ್ರವರ್ಗಕ್ಕೆ ಮೀಸಲಿರಿಸಿ ಕಟ್–ಆಫ್ ಅಂಕಗಳು |
|---|---|---|---|---|---|---|---|---|---|---|---|
| 04 | 152603 | ವಿದ್ಯಾ ಹಿರೇಮಠ್ | ಮಹಿಳೆ | 3ಬಿ | ಹೌದು | 12.6.1978 | 51.5658 | 3 | 15 | 66.5658 | 65.4126 |
| 05 | 164964 | ರಂಗಪ್ಪಾ ಲಕ್ಷ್ಮಣ ರೇವಡಕುಂದಿ | ಪುರುಷ | 3ಬಿ | ಹೌದು | 01.6.1984 | 61.6857 | 1 | 5 | 66.6857 | 66.5444 |

## ಹುದ್ದೆ: ಸಮಾಜ ವಿಜ್ಞಾನ ಶಿಕ್ಷಕರು(ಕನ್ನಡ ಮಾಧ್ಯಮ)

| ಕ್ರ.ಸ | ನೋ.ಸಂ | ಅಭ್ಯರ್ಥಿಯ ಹೆಸರು | ಲಿಂಗ | ಪ್ರವರ್ಗ | ಕ.ಮಾ | ಜನ್ಮ ದಿನಾಂಕ | ಸಿ.ಸಿ.ಇ. ಅಂಕಗಳು | ಪರಿಗಣಿಸಿದ ಸೇವಾ ವರ್ಷಗಳು | ಸೇವಾ ಕೃಪಾಂಕ ಶೇ. | ಶೇ. ಒಟ್ಟು ಅಂಕಗಳು | ಪ್ರವರ್ಗಕ್ಕೆ ಮೀಸಲಿರಿಸಿದ ಕಟ್–ಆಫ್ ಅಂಕಗಳು |
|---|---|---|---|---|---|---|---|---|---|---|---|
| 06 | 252180 | ಮಮತ ಟಿ.ಪಿ. | ಮಹಿಳೆ | 3ಎ | ಹೌದು | 20.5.1977 | 49.3784 | 4 | 20 | 69.3784 | 65.0312 |

## ಹುದ್ದೆ: ದೈಹಿಕ ಶಿಕ್ಷಣ ಶಿಕ್ಷಕರು

| ಕ್ರ.ಸ | ನೋ.ಸಂ | ಅಭ್ಯರ್ಥಿಯ ಹೆಸರು | ಲಿಂಗ | ಪ್ರವರ್ಗ | ಕ.ಮಾ | ಜನ್ಮ ದಿನಾಂಕ | ಸಿ.ಸಿ.ಇ. ಅಂಕಗಳು | ಪರಿಗಣಿಸಿದ ಸೇವಾ ವರ್ಷಗಳು | ಸೇವಾ ಕೃಪಾಂಕ ಶೇ. | ಶೇ. ಒಟ್ಟು ಅಂಕಗಳು | ಪ್ರವರ್ಗಕ್ಕೆ ಮೀಸಲಿರಿಸಿದ ಕಟ್–ಆಫ್ ಅಂಕಗಳು |
|---|---|---|---|---|---|---|---|---|---|---|---|
| 07 | 151360 | ಬಸವರಾಜು ಟಿ. | ಪುರುಷ | ಪ.ಜಾತಿ | ಹೌದು | 02.6.1977 | 50.29166 | 2 | 10 | 60.29166 | 59.88 |

ನಿಬಂಧನೆಗಳು:–

1. ಈ ಆಯ್ಕೆಪಟ್ಟಿಯು ಭವಿಷ್ಯದಲ್ಲಿ ಬರಬಹುದಾದ ಮಾನ್ಯ ಉಚ್ಚ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೊಳಪಟ್ಟಿರುತ್ತದೆ.
2. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಗಳಿದ ವರ್ಗಗಳು, ಯೋಜನಾ ನಿರಾಶ್ರಿತರು, ಅಂಗವಿಕಲರು, ಕನ್ನಡ ಮಾಧ್ಯಮ, ಗ್ರಾಮೀಣ ಪ್ರದೇಶದ ಅಭ್ಯರ್ಥಿ, ಮಾಜಿ ಸೈನಿಕ ಮುಂತಾದ ಮೀಸಲಾತಿಯ ಪರಿಗಣನೆಗೆ ಅಭ್ಯರ್ಥಿಯು ಸಲ್ಲಿಸಿರುವ ಪ್ರಮಾಣ ಪತ್ರಗಳು ಸಂಬಂಧಪಟ್ಟ ಜಿಲ್ಲಾ ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದನಂತರ ಅಂಗೀಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ನಡತೆ ಹಾಗೂ ಪೂರ್ವಚರಿತ್ರೆಗೆ (Character and Antecedents) ಸಂಬಂಧಿಸಿದಂತೆ Police Verification ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

4. ಈ ಪಟ್ಟಿಯಲ್ಲಿನ ಅಭ್ಯರ್ಥಿಗಳ ಶೈಕ್ಷಣಿಕ ಮೂಲದಾಖಲಾತಿಗಳ ನೈಜತೆ ಪರಿಶೀಲನೆ ಸಮಯದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು.
5. ಸೇವಾ ಕೃಪಾಂಕ ಪರಿಗಣನೆಗಾಗಿ ಅಭ್ಯರ್ಥಿಗಳು ತಾವು ಸಲ್ಲಿಸಿರುವ ನೇಮಕಾತಿ ಆದೇಶ, ಹಾಜರಾತಿ ವಹಿ, ವೇತನ ಬಟವಾಡೆ ವಿವರಗಳು, ವಯೋಮಾನಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇನ್ನಿತರ ಸೇವಾ ದಾಖಲಾತಿಗಳು ಭವಿಷ್ಯದಲ್ಲಿ ನೈಜವಲ್ಲವೆಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯು ತಂತಾನೇ ರದ್ದುಗೊಳ್ಳುವುದಲ್ಲದೇ, ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು ಹಾಗೂ ಪಾವತಿಸಿದ ವೇತನವನ್ನು ವಸೂಲುಮಾಡಲಾಗುವುದು.
6. ಈ ಆಯ್ಕೆಪಟ್ಟಿಯಲ್ಲಿ ಹೆಸರು ಇದ್ದ ಮಾತ್ರಕ್ಕೆ, ಅಭ್ಯರ್ಥಿಗಳು ಸದರಿ ಹುದ್ದೆಗೆ ಆಯ್ಕೆಯಾಗಿದ್ದಾರೆಂದು ಭಾವಿಸಬಾರದು. ಹೆಸರನ್ನು ಪ್ರಕಟಿಸಿದ ಮಾತ್ರಕ್ಕೆ ಅಭ್ಯರ್ಥಿಗೆ ಯಾವುದೇ ಹಕ್ಕು ಇರುವುದಿಲ್ಲ.
7. ಅಂಗವಿಕಲರ ಮೀಸಲಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ವೈದ್ಯಕೀಯ ಮಂಡಳಿ (District Medical Board) ಅವರಿಂದ ಅಗತ್ಯ ಪ್ರಮಾಣಪತ್ರವನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.
8. ಈ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳು ವೈದ್ಯಕೀಯ ದೇಹದಾರ್ಢ್ಯತೆ ಪ್ರಮಾಣ ಪತ್ರವನ್ನು ಜಿಲ್ಲಾ ವೈದ್ಯಾಧಿಕಾರಿ/ಜಿಲ್ಲಾ ಸರ್ಜನ್ ಶ್ರೇಣಿಯ ಅಧಿಕಾರಿಗಳಿಂದ ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.
9. ಈ ಆಯ್ಕೆಪಟ್ಟಿಯು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:104065-80/2015 (S-RES) ರ ಹಾಗೂ ಮಾನ್ಯ ಉಚ್ಚ ನ್ಯಾಯಾಲಯಗಳ ಇತರ ಯಾವುದೇ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಬೆಂಗಳೂರು.

<u>ಪ್ರತಿಯನ್ನು:-</u>

1. ಗೌರವಗಳೊಂದಿಗೆ, ಸನ್ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ ಸಲ್ಲಿಸಿದೆ. ಸದರಿ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಕೋರಲಾಗಿದೆ.
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು, ಇವರ ಮಾಹಿತಿಗಾಗಿ ಸಲ್ಲಿಸಿದೆ.
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
6. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
7. ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು/ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಜಿಲ್ಲಾ ಅಧಿಕಾರಿಗಳು, ಇಲಾಖೆ/ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿಯೋಜನೆ/ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಇವರ ಮಾಹಿತಿಗಾಗಿ.
8. ಕಛೇರಿ ಸೂಚನಾ ಫಲಕಕ್ಕೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
ಬೆಂಗಳೂರು.